ಇ) ಇದರ ಬಗ್ಗೆ ಸರ್ಕಾರದ ಗಮನಕ್ಕೆ ವಿಷಯ ಬಂದಿರುವುದಿಲ್ಲ.

ಗೃಹ ಮಂಡಳಿಯಲ್ಲಿ ನಿವೇಶನ/ಮನೆ ಹಂಚಿಕೆ

111 (189)

ಶ್ರೀ ಸುನೀಲ್ ವಿ.ಹೆಗಡೆ.(ಹಳಿಯಾಳ)

ಅ) ಕರ್ನಾಟಕ ಗೃಹ ಮಂಡಳಿಯವರು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಮನೆಗಳ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಅರ್ಜಿಗಳನ್ನು ಪಡೆಯಲಾಗಿದೆ;

ಇ) ವಸತಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು; ಹಾಗೂ ಎಷ್ಟು ಮನೆ/ನಿವೇಶನ ನೀಡಲು ಗುರಿ ಹೊಂದಲಾಗಿದೆ;

ಈ) ಈಗಾಗಲೇ ಅರ್ಜಿಗಳನ್ನು ಸಲ್ಲಿಸಿರುವವರಿಗೆ ನಿವೇಶನ/ಮನೆಗಳನ್ನು ಯಾವ ಕಾಲ ಮಿತಿಯಲ್ಲಿ ಹಂಚಿಕೆ ಮಾಡಲಾಗುತ್ತದೆ? (ಪೂರ್ಣ ವಿವರ ನೀಡುವುದು)

ಶ್ರೀ ವಿ.ಸೋಮಣ್ಣ (ಮಾನ್ಯ ವಸತಿ ಸಚಿವರು)

ಅ) ಬಂದಿದೆ.

ಆ) 2009 ರಲ್ಲಿ ಕೈಗೊಂಡ ಬೇಡಿಕೆ ಸಮೀಕ್ಷೆಯಲ್ಲಿ ನಿವೇಶನ/ಮನೆ ಕೋರಿ ಒಟ್ಟು 1769 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಇ) ಹಳಿಯಾಳ ತಾ//ಅಲಸಿ ಗ್ರಾಮದಲ್ಲಿ ಒಟ್ಟು 25.02ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿ: 16.09.2010ರಂದು ಪ್ರಕಟಿಸಲಾಗಿತ್ತು. ಆದರೆ ಸದರಿ ಗ್ರಾಮದ ಭೂಮಾಲೀಕರಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಹಳಿಯಾಳ ಪಟ್ಟಣದಲ್ಲಿ ವಸತಿ ಯೋಜನೆಗಾಗಿ ಬೇರೆ ಜಮೀನನ್ನು ಸಂಗ್ರಹಿಸಲು ಪರಿಶೀಲಿಸಲಾಗುತ್ತಿದೆ.

ಈ) ವಸತಿ ಯೋಜನೆಗಾಗಿ ಜಮೀನನ್ನು ಸಂಗ್ರಹಿಸಿದ ನಂತರ, ಯೋಜನೆಯನ್ನು ತಯಾರಿಸಿ ಹಾಗು ಕಾರ್ಯಗತಗೊಳಿಸಿ ಅರ್ಜಿಗಳನ್ನು ಸಲ್ಲಿಸಿದವರಿಗೆ ನಿವೇಶನ/ಮನೆಗಳನ್ನು ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಬ್ ಸ್ಟೇಷನಗಳ ಪ್ರಾರಂಭ

86 : (199)

ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು)

ಅ) ಸಿಂಧನೂರು ತಾಲ್ಲೂಕಿನ ಜವಳಗೇರಾ 110 ಕೆ.ವಿ. ಗಾಂಧಿನಗರ 32 ಕೆ.ವಿ. ಹಾಗೂ ವೆಂಕಟೇಶ್ವರ ಕ್ಯಾಂಪ್‌ಗಳಲ್ಲಿ 33 ಕೆ.ವಿ. ಸಬ್ ಸ್ಟೇಷನ್‌ಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಸಬ್-ಸ್ಟೇಷನ್‌ಗಳನ್ನು ಪ್ರಾರಂಭಿಸಲು ಸ್ಥಳ ಗುರುತಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಭೂಮಿಯನ್ನು ವಶಪಡಿಸಿ ಕೊಳ್ಳಲಾಗಿದೆ? (ವಿವರಗಳನ್ನು ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು)

ಅ) ಸಂಧನೂರು ತಾಲ್ಲೂಕಿನ ಜವಳಗೇರಾದಲ್ಲಿ 110 ಕೆ.ವಿ. ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಪ್ರಸ್ತಾವನೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ಮುಂದೆ ಹಾಗೂ ಗಾಂಧಿನಗರ ಮತ್ತು ವೆಂಕಟೇಶ್ವರ ಕ್ಯಾಂಪ್‌ಗಳಲ್ಲಿ 33 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಪ್ರಸ್ತಾವನೆ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿಯ ಮುಂದೆ ಇರುವುದಿಲ್ಲ.

ಆ, ಇ, ಈ) ಆ ರಿಂದ ಈ ವರೆಗಿನ ಪ್ರಶ್ನೆಗಳು ಉದ್ಭವಿಸುವುದಿಲ್ಲ.